ಶ್ರೀಮತಿ ಮನೋರಮಾ ಮಾಧ್ವರಾಜ್.—ಸಂಪುಟದ ಸಭೆಯಲ್ಲಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ನಾವು ಬರುತ್ತೇವೆ.

ಶ್ರೀ ವಾಟಾಳ್ ನಾಗರಾಜ್ —ಅಧ್ಯಕ್ಷರೆ, ಇದು ಸರಿಯಲ್ಲ, ತಾವು ದಾವಣಗೆರೆಯಲ್ಲಿದ್ದವರು, ಅಲ್ಲಿದ್ದ ಕಾಲೇಜುಗಳನ್ನು ನೋಡಿದ್ದೀರಿ. ಮೈಸೂರು, ಬೆಂಗಳೂರು ಕಾಲೇಜುಗಳನ್ನು ನೋಡಿದ್ದೀರಿ. ರಾಜಕೀಯ ಪ್ರಭಾವ ಪಡೆದವರ ಮತ್ತು ಜಾತಿ ಪ್ರಭಾವ ಪಡೆದವರ ಕಾಲೇಜುಗಳೇ ಆಗಿವೆ. ಇಂತಹ ಕಾಲೇಜುಗಳು ಬೇಡ. ಇವು ಬಡವರನ್ನು ಶೋಷಣೆ ಮಾಡುತ್ತವೆ. ಬಡಮಕ್ಕಳ ಶೋಷಣೆಯಾಗುತ್ತದೆ. ಕನ್ವಡಿಗರ ಶೋಷಣೆಯಾಗುತ್ತದೆ. ಇದು ಸರಿಯಲ್ಲ ಬಡ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತದೆ ಇಂತಹ ಕಾಲೇಜುಗಳು ಬೇಡ ಎಂದು ಹೇಳಿ, ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಉಪಾಧ್ಯಕ್ಷರು.—ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಂ. ನಾರಾಯಣಸ್ವಾಮಿ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ನಿಯಮ ೩೩೪ರ ಮೇರೆಗೆ

೧) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಪದವೀ ಪೂರ್ವ ಕಾಲೇಜಿನಲ್ಲಿ ಮಾರ್ಚ್ ೧೯೮೯ರ ಅಕ್ಟೋಬರ್ ೧೯೮೯ರ ಪರೀಕ್ಷಾ ಕೇಂದ್ರಗಳಲ್ಲಿ ಕೆಲಸ ಮಾಡಿದಂತಹ ಮೌಲ್ಯಮಾಪಕರ ಸಂಭಾವನೆಯನ್ನು ಕೊಡದೇ ಇರುವುದು,

ಶ್ರೀ ರುಕ್ಮಯ್ಯ ಪೂಜಾರಿ.— ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಪದವಿಪೂರ್ವ ಕಾಲೇಜಿನಲ್ಲಿ ೧೯೮೯ ಮಾರ್ಚ್ ಮತ್ತು ೮೯ ಅಕ್ಟೋಬರ್‌ನಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಮೌಲ್ಯಮಾಪಕರಾಗಿ ಕೆಲಸ ಮಾಡಿದಂತಹ ಅಧ್ಯಾಪಕರುಗಳಿಗೆ ಕೊಡಬೇಕಾಗಿದ್ದ ಸಂಭಾವನೆ ಹಣವನ್ನು ಇವತ್ತಿನವರೆಗೆ ಕೊಟ್ಟಿರುವುದಿಲ್ಲ. ಮತ್ತು ವಿಟ್ಲ ಪದವಿ ಪೂರ್ವ ಕಾಲೇಜಿನಲ್ಲಿ ದುಡಿಯುತ್ತಿರುವ ಶ್ರೀ ಪಿ. ಕೃಷ್ಣಶಿಥಿಲಾಯರವರು ೮೯ರ ಅಕ್ಟೋಬರ್‌ನಲ್ಲಿ ವಿವೇಕಾನಂದ ಕಾಲೇಜು ಪುತ್ತೂರುನಲ್ಲಿ ನಡೆದ ಪರೀಕ್ಷಾ ಸಂದರ್ಭದಲ್ಲಿ ಕಸ್ಟೋಡಿಯನ್ ಆಗಿ ಕೆಲಸ ಮಾಡಿರುವುದರ ಟಿ.ಎ. ಬಿಲ್ಲು ಕೂಡ ಪಾವತಿಯಾಗಿರುವುದಿಲ್ಲ ಎಂಬುದಾಗಿ ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.— ಇದಕ್ಕೆ ಹೇಳಿಕೆ ಕೊಡಬೇಕಾದುದೇನೂ ಇಲ್ಲ. ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ. I take note of it.

೨) ಕೊಳ್ಳೇಗಾಲ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಿಂದ ಹೆರಿಗೆ ಭತ್ಯದ ಹಣ ದುರುಪಯೋಗ

ಶ್ರೀ ಜಿ. ರಾಜೂಗೌಡ.— ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾದ ಶ್ರೀ ಬಸವರಾಜು ಅವರು ತಮ್ಮ ಸೇವೆಯ ಅವಧಿಯಲ್ಲಿ ಹೆರಿಗೆ ಭತ್ಯದ ಹಣದಲ್ಲಿ ಸುಮಾರು ೫೦,೦೦೦ ಕ್ಕಿಂತಲ್ಲೂ ಹೆಚ್ಚು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಖಚಿತವಾಗಿ ತಿಳಿದು ಬಂದಿದೆ. ಯಾರಿಗೆ ಹೆರಿಗೆ ಭತ್ಯದ ಹಣವನ್ನು ಪಾವತಿ ಮಾಡಬೇಕು ಅವರ ಹೆಸರಿನ ಡಿ.ಡಿ.ಯನ್ನು ಪಡೆದು ಅವರಿಗೆ ಎತರಣೆ ಮಾಡಬೇಕೆಂಬ ಪದ್ಧತಿ ರೂಢಿಯಲ್ಲಿದ್ದರೂ ಸಹ ಅವರು ಇದನ್ನು ಕೈ ಬಿಟ್ಟು ಹಣವನ್ನು ಬಟವಾಡೆ ಮಾಡಿದ್ದಾರೆ. ಈ ರೀತಿಯಾಗಿ ಕೊಳ್ಳೇಗಾಲ ವಿಜಾನೆಯಿಂದ ಎ.ಸಿ. ಬಿಲ್ ಮುಖಾಂತರ ಲಕ್ಷಾಂತರ ರೂಪಾಯಿ ಹಣ ಪಡೆದು ಆದರಲ್ಲಿ ೫೦,೦೦೦ ಕ್ಕಿಂತ ಹೆಚ್ಚು ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಎರಡನೆಯದಾಗಿ ಕುಟುಂಬ ಕಲ್ಯಾಣ ಯೋಜನೆಯ ಕೆಳಗೆ ಕೈಗೊಳ್ಳುವ ಸಂತಾನ ಹರಣ ಶಸ್ತ್ರ ಚಿಕಿತ್ಸೆಯ ಹಣವನ್ನು ಪಡೆದು ಅದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂಬುದಾಗಿ ತಿಳಿದು ಬಂದಿದೆ. ಇವರಿಗೆ ಕಾಡುಗೆರೆಯಿಂದ ಮಹದೇಶ್ವರ ಬೆಟ್ಟಕ್ಕೆ ವರ್ಗಾವಣೆ ಯಾಗಿದ್ದರೂ ಇವರ ಸ್ಥಳಕ್ಕೆ